

ನಾಯಕಿಯರಾದ ರಚಿತಾ ರಾಮ್, ಹರಿಪ್ರಿಯಾ ಅವರೊಂದಿಗೆ 'ಭರ್ಜರಿ'ಗಂಡು ಧ್ರುವ ಸರ್ಜಾ

ಶಿವರುದ್ರಯ್ಯ ನಿರ್ದೇಶನದ 'ಮಾರಿಕೊಂಡವರು', ಯೋಗೇಶ್ ಮಾಸ್ತರರ 'ಮರಳಿ ಮನೆಗೆ' ಹಾಗೂ ಸುಂದರ್ ರಾಜ್ ಅಭಿನಯದ ಇನ್ನೂರನೇ ಸಿನಿಮಾ 'ಲಿಫ್ಟ್ ಮ್ಯಾನ್' ತೆರೆಕಂಡ ಕೆಲವು ಚಿತ್ರಗಳು. ಕೆಲವು ಚಿತ್ರಗಳು ವಿವಿಧ ಚಿತ್ರೋತ್ಸವಗಳಲ್ಲಿ ಸುದ್ದಿ ಮಾಡಿದರೂ ಅವುಗಳನ್ನು ನೋಡುವ ಅವಕಾಶ ಕನ್ನಡದ ಪ್ರೇಕ್ಷಕರಿಗೆ ಇನ್ನೂ ದೊರೆತಿಲ್ಲ. ಬರಗೂರು ರಾಮಚಂದ್ರಪ್ಪನವರ 'ಮೂಕನಾಯಕ' ಹಾಗೂ ಪಿ. ಶೇಷಾದ್ರಿ ನಿರ್ದೇಶನದ 'ಭೇಟಿ' ತೆರೆಕಾಣಬೇಕಿದೆ.

## ಡಬ್ಬಿಂಗ್ ರಾಜಕಾರಣ

2017ರ ಮತ್ತೊಂದು ವಿಶೇಷ ಡಬ್ಬಿಂಗ್ ಚಿತ್ರಗಳಿಗೆ ಗಾಂಧಿನಗರ ಬಾಗಿಲು ತೆರೆದುದು. 'ಸತ್ಯದೇವ ಐಪಿಎಸ್', 'ವೇಗ ಮತ್ತು ಉದ್ವೇಗ' ಹಾಗೂ 'ಧೀರ' ಎನ್ನುವ ಮೂರು ಡಬ್ಬಿಂಗ್ ಚಿತ್ರಗಳು ತೆರೆಕಾಣುವ ಮೂಲಕ, ಡಬ್ಬಿಂಗ್ ಹೋರಾಟಗಾರರ ಉದ್ವೇಗ ಮತ್ತು ವೇಗ ತಣಿದ ವರ್ಷವಿದು. ಕಳೆದ ಐದಾರು ವರ್ಷಗಳಿಂದ ತೀವ್ರವಾಗಿದ್ದ 'ಡಬ್ಬಿಂಗ್ ರಾಜಕಾರಣ' ತಾರ್ಕಿಕ ಅಂತ್ಯವೊಂದನ್ನು ಪಡೆದ ಸೂಚನೆ ಕಾಣಿಸುತ್ತಿದೆ. ಡಬ್ಬಿಂಗ್ ಚಿತ್ರಗಳಿಗೆ ದಿಡ್ಡಿ ಬಾಗಿಲನ್ನೇನೋ ತೆರೆದಾಗಿದೆ. ಅದರ ಸ್ಪಷ್ಟ ಪರಿಣಾಮ ತಿಳಿಯಲು ಮುಂದಿನ ನಾಲ್ಕೈದು ವರ್ಷಗಳೇ ಬೇಕಾಗಬಹುದೇನೊ?

ತೆರೆಕಂಡ ಚಿತ್ರಗಳ ಸಂಖ್ಯೆಯ ಕಾರಣದಿಂದಲೂ 2017 ಕನ್ನಡ ಚಿತ್ರರಂಗದ ಪಾಲಿಗೆ ಉತ್ಕರ್ಷದ ವರ್ಷ. ಡಿಸೆಂಬರ್ ಎರಡನೇ ವಾರದ ಕೊನೆಗೆ ತೆರೆಕಂಡ ಸಿನಿಮಾಗಳು ಸುಮಾರು 180. ಎಂದಿನಂತೆ ಯಶಸ್ಸಿನ ಸಂಖ್ಯೆ ಶೇ. 10ರ ಆಸುಪಾಸಿನಲ್ಲೇ ಇದೆ.

ಇವೆಲ್ಲವೂ 2017ರ ಕನ್ನಡ ಚಿತ್ರರಂಗದ ಕೆಲವು ಚೆಲ್ಲಾಪಿಲ್ಲಿ ಬಿಂಬಗಳು. ಈ ಬಿಂಬಗಳ ಆಧಾರದ ಮೇಲೆ 2018ರ ಕನ್ನಡದ ಬೆಳ್ಳಿತೆರೆಯನ್ನು ಊಹಿಸಿಕೊಳ್ಳಬಹುದೇ? 'ಹೊಸ ಅಲೆ'ಯ ಮುಂದುವರಿಕೆಯನ್ನು 2018ರಲ್ಲೂ ನಿರೀಕ್ಷಿಸಬಹುದೇ?

ಈ ಪ್ರಶ್ನೆಗೆ ಉತ್ತರವಾಗಿ, ಮೊದಲ ಪ್ರಯತ್ನಗಳಲ್ಲಿಯೇ ಯಶಸ್ಸು ಪಡೆದ ಕೆಲವು ಚಿತ್ರಗಳ ನಿರ್ದೇಶಕರ ಮುಂದಿನ ನಡೆಗಳನ್ನು ಗಮನಿಸಬಹುದು.

'ಗೋಧಿಬಣ್ಣ'ದ ಹೇಮಂತ್ ಈಗ 'ಕವಲುದಾರಿ' ಎನ್ನುವ ಸಿನಿಮಾ ರೂಪಿಸುತ್ತಿದ್ದಾರೆ. ಪುನೀತ್ ರಾಜ್‌ಕುಮಾರ್ ನಿರ್ಮಾಣದ ಸಿನಿಮಾ ಎನ್ನುವುದು ಇದರ ವಿಶೇಷ. 'ಆಪರೇಷನ್ ಅಲಮೇಲಮ್ಮ' ಖ್ಯಾತಿಯ ರಿಷಿ ಜೊತೆಗೆ ಅನಂತನಾಗ್ 'ಕವಲುದಾರಿ'ಯ ತಾರಾಗಣದಲ್ಲಿದ್ದಾರೆ. ಅನಂತ್ ನಟನೆಯ 'ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ', ಕಬೀರ ಖ್ಯಾತಿಯ ನರೇಂದ್ರ ಬಾಬು ನಿರ್ದೇಶನದಿಂದಾಗಿ ಸಹೃದಯರ ಗಮನಸೆಳೆದಿದೆ.

'ರಾಮಾ ರಾಮಾ ರೇ' ಚಿತ್ರದ ಸತ್ಯಪ್ರಕಾಶ್ ಕೂಡ ಹೊಸ ಚಿತ್ರದ ತಯಾರಿಯಲ್ಲಿ ಚಿತ್ರಕಥೆ ತಿದ್ದಿತೀಡಿಯಾಗಿದೆ. ಮಕ್ಕಳ ಮನಸ್ಸನ್ನು ಕೇಂದ್ರವಾಗಿಟ್ಟುಕೊಂಡು ಸಮಕಾಲೀನ ಬದುಕಿನ ತವಕ ತಲ್ಲಣಗಳಿಗೆ ಕನ್ನಡಿ ಹಿಡಿಯುವ ಪ್ರಯತ್ನ ಅವರದು. 'ಕಹಿ' ಚಿತ್ರದ ಅರವಿಂದರ ಎರಡನೇ ಚಿತ್ರವೂ 2018ರಲ್ಲೇ ತೆರೆಕಾಣಲಿದೆ. ರಿಷಬ್ ಶೆಟ್ಟಿ ನಿರ್ದೇಶನದ 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು', ಸಾದ್ ಖಾನ್ ನಿರ್ದೇಶನದ 'ಹಂಬಲ್ ಪೊಲಿಟಿಷಿಯನ್ ನೊಗ್‌ರಾಜ್' ಚಿತ್ರಗಳ ಬಗ್ಗೆಯೂ ಅಪಾರ ನಿರೀಕ್ಷೆಗಳಿವೆ.

ಅನುಭವಿ ನಿರ್ದೇಶಕರು ಹಾಗೂ ತಾರಾ ವರ್ಚಸ್ಸಿನ ನಟರ ಚಿತ್ರಗಳೂ ಗಮನ ಸೆಳೆಯುವಂತಿವೆ. 'ನೀರ್ ದೋಸೆ'ಯ ವಿಜಯ ಪ್ರಸಾದ್ 'ಲೇಡೀಸ್ ಟೈಲರ್' ರೂಪಿಸುವ ಉಮೇದಿನಲ್ಲಿದ್ದಾರೆ. ಜಯತೀರ್ಥರ 'ವೆನಿಲ್ಲಾ' ತೆರೆಕಾಣುವ ತಯಾರಿಯಲ್ಲಿದೆ. ಸೂರಿ ನಿರ್ದೇಶನದ ಹಾಗೂ ಶಿವಣ್ಣ ನಟನೆಯ 'ಟಗರು' 2018ರ ಮೊದಲ ತ್ರೈಮಾಸಿಕದಲ್ಲಿಯೇ ಗುಟುರು ಹಾಕಲಿದೆ. ಇವೆಲ್ಲದರ ಜೊತೆಗೆ ಸದ್ದಿಲ್ಲದೆ ಚಿತ್ರೀಕರಣ ನಡೆಸುತ್ತಿರುವ ಯಶ್ ನಟನೆಯ 'ಕೆಜಿಎಫ್' 2018ರ ಬಹುನಿರೀಕ್ಷೆಯ ಚಿತ್ರಗಳಲ್ಲೊಂದಾಗಿದೆ. 2017ರಲ್ಲಿ ಯಶ್ ನಟನೆಯ ಯಾವುದೇ ಸಿನಿಮಾ ತೆರೆಕಾಣಲಿಲ್ಲವಾದರೂ, ಕೊಪ್ಪಳ ಜಿಲ್ಲೆಯ ತಲ್ಲೂರು ಎನ್ನುವ ಗ್ರಾಮದಲ್ಲಿ ಯಶ್ ಅಭಿವೃದ್ಧಿಪಡಿಸಿದ ಕೆರೆಯ ಕಾಮಗಾರಿ ಜನಪ್ರಿಯ ಸಿನಿಮಾದಂತೆಯೂ ಇದೆ, ತೆರೆಯಾಚೆಗೆ ಕಲಾವಿದನೊಬ್ಬನ ಜನಪರ ತುಡಿತದಂತೆಯೂ ಇದೆ.

ಉಪೇಂದ್ರ ನಟನೆಯ 'ಉಪೇಂದ್ರ ಮತ್ತೆ ಬಾ' ಸಿನಿಮಾ ಚಿತ್ರರಸಿಕರ ನಿರೀಕ್ಷೆ ಹುಸಿ ಮಾಡಿದ ಸಿನಿಮಾ. ಸದ್ಯಕ್ಕೆ ಉಪೇಂದ್ರ ತಮ್ಮ ಸಿನಿಮಾಗಳಲ್ಲಿನ ಕನಸುಗಳನ್ನು ಚುನಾವಣಾ ರಾಜಕೀಯದಲ್ಲಿ ನನಸು ಮಾಡಿಕೊಳ್ಳುವ ಪ್ರಯತ್ನದಲ್ಲಿದ್ದಾರೆ.